ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	264
ಸದಸ್ಯರ ಹೆಸರು	:	ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳು ಕ್ಷೇತ್ರ)
ಉತ್ತರಿಸುವ ದಿನಾಂಕ	:	16-07-2019
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಗ್ರಾಮ ಪಂಚಾಯತ್‌ಗಳ ಪೈಕಿ ಎಷ್ಟು ಗ್ರಾಮ ಪಂಚಾಯತಿಗಳಿಗೆ ಹೊಸ ಕಟ್ಟಡಗಳಿವೆ: (ಮಾಹಿತಿ ನೀಡುವುದು)	ರಾಜ್ಯದಲ್ಲಿ ಹೊಸದಾಗಿ 463 ಗ್ರಾಮ ಪಂಚಾಯತಿಗಳನ್ನು ಸ್ಥಾಪನೆ ಮಾಡಲಾಗಿದ್ದು, ಈ ಪೈಕಿ ಹೊಸ ಕಟ್ಟಡ ಹೊಂದಿರುವ ಗ್ರಾಮ ಪಂಚಾಯತಿಗಳ ಸಂಖ್ಯೆ: 166 ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.
ಆ	ರಾಜ್ಯದಲ್ಲಿ ಸ್ವಂತ ಕಟ್ಟಡವಿಲ್ಲದ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ಒದಗಿಸುವುದು)	ಸ್ವಂತ ಕಟ್ಟಡವಿಲ್ಲದ ಗ್ರಾಮ ಪಂಚಾಯತಿಗಳ ಸಂಖ್ಯೆ:294
ಇ	ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಗ್ರಾಮ ಪಂಚಾಯತಿಗಳಿಗೆ ಸ್ವಂತ ಕಟ್ಟಡ ಕಟ್ಟಲು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಅನುದಾನ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ ಮಾಹಿತಿ ಒದಗಿಸುವುದು?	ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಗ್ರಾಮ ಪಂಚಾಯತಿಗಳಿಗೆ ಸ್ವಂತ ಕಟ್ಟಡ ಕಟ್ಟಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುದಾನ ನೀಡಲಾಗುತ್ತಿದೆ. ನೂತನ ಗ್ರಾಮ ಪಂಚಾಯತಿ ಕಛೇರಿ ಕಟ್ಟಡ ನಿರ್ಮಿಸಲು ಅಂದಾಜು ರೂ. 40.00 ಲಕ್ಷಗಳಂತೆ ಅನುಮೋದನೆ ನೀಡಲಾಗಿದ್ದು, ಸರ್ಕಾರದಿಂದ ಪ್ರತಿ ಗ್ರಾಮ ಪಂಚಾಯತಿಗೆ ರೂ. 20.00 ಲಕ್ಷ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 16.25 ಲಕ್ಷ ಹಾಗೂ 13ನೇ ಹಣಕಾಸು ಯೋಜನೆ ಅಥವಾ ಇತರೆ ಯೋಜನೆಗಳಿಂದ ರೂ. 3.75 ಲಕ್ಷಗಳನ್ನು ಬಳಸಿಕೊಂಡು ನೂತನ ಗ್ರಾಮ ಪಂಚಾಯತಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ: ಗ್ರಾಅಪ 582 ಗ್ರಾಪಂಅ 2019

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:264 ಕ್ಕೆ ಅನುಬಂಧ–1

ಕ್ರಸಂ.	ಜಿಲ್ಲೆ	ಹೊಸ ಗ್ರಾಮ ಪಂಚಾಯತಿಗಳಲ್ಲಿ ಹೊಸ ಕಟ್ಟಡ ಹೊಂದಿರುವ ಗ್ರಾಮ ಪಂಚಾಯತಿಗಳ ಸಂಖ್ಯೆ	ಹೊಸ ಗ್ರಾಮ ಪಂಚಾಯತಿಗಳಲ್ಲಿ ಸ್ವಂತ ಕಟ್ಟಡವಿಲ್ಲದ ಗ್ರಾಮ ಪಂಚಾಯತಿಗಳ ಸಂಖ್ಯೆ	ಹೊಸ ಗ್ರಾಮ ಪಂಚಾಯತಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಬಿಡುಗಡೆ ಮಾಡಿರುವ ಅನುದಾನ (ರೂ. ಲಕ್ಷಗಳಲ್ಲಿ)
1	2	3	4	5
1	ಬೆಂಗಳೂರು(ನ)	6	11	70.00
2	ಬೆಂಗಳೂರು(ಗ್ರಾ)	1	6	50.00
3	ಬೆಳಗಾಂ	3	25	330.00
4	ಬಳ್ಳಾರಿ	8	9	449.78
5	ಬೀದರ್	9	6	70.00
6	ಬಿಜಾಪುರ	6	15	210.00
7	ಚಿಕ್ಕಮಗಳೂರು	0	1	10.00
8	ಚಿತ್ರದುರ್ಗ	2	3	50.00
9	ದಕ್ಷಿಣಕನ್ನಡ	8	14	320.00
10	ಧಾರವಾಡ	4	13	170.00
11	ಗುಲ್ಬರ್ಗಾ	21	36	399.00
12	ಯಾದಗಿರಿ	0	9	65.00
13	ಹಾಸನ	0	9	90.00
14	ಕೊಡಗು	1	5	50.00
15	ಕೋಲಾರ	0	0	0
16	ಮಂಡ್ಯ	0	2	20.00
17	ಮೈಸೂರು	4	29	40.00
18	ರಾಯಚೂರು	9	11	465.93
19	ಶಿವಮೊಗ್ಗ	11	0	110.00
20	ತುಮಕೂರು	0	9	90.00
21	ಉತ್ತರ ಕನ್ನಡ	15	15	240.00
22	ಚಾಮರಾಜನಗರ	0	11	110.00
23	ದಾವಣಗೆರೆ	1	2	30.00
24	ಬಾಗಲಕೋಟೆ	8	32	390.00
25	ಗದಗ	16	0	160.00
26	ಹಾವೇರಿ	20	0	120.00
27	ಉಡುಪಿ	3	1	150.00
28	ಕೊಪ್ಪಳ	10	14	307.58
29	ರಾಮನಗರ	0	0	0
30	ಚಿಕ್ಕಬಳ್ಳಾಪುರ	0	6	60.00
	ಒಟ್ಟು	**166**	**294**	**4627.29**